SATYAVADI Founded 1917 Regd. No. M. 1299

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 29 ಸೂಚಿಕೆ 55] ಮಂಗಳವಾರ 4—12—45 [ಬಿಡಿ ಪ್ರತಿ 3 ಪೈ

ಮತ್ತೆ ತ್ರಿಮೂರ್ತಿಗಳ ಭೇಟಿಯೇ

ಲಂಡನ್ ಡಿ 2—ಲಾಡ್ರ್ಸ್ ಸಭೆಯಲ್ಲಿ ಭಾರತದ ಏಕಮಾತ್ರ ಲಾಡ್ರ್ಸಾದ ಸಿಂಹರವರು ಲಂಡನ್ನಿನಿಂದ ಹೊಂಟಿರುವರು. ಅವರು ಬಂಗಾಳಾಕ್ಕೆ ಒಂದಿದು ಅಲ್ಲಿಯ ಆರ್ಥಿಕ ಪರಿಸ್ಥಿತಿಯನ್ನು ಪರಿಚಯ ಮಾಡಿಕೊಳ್ಳವರು.. ಮಾರ್ಚಿಗೆ ಲಂಡನ್ನಿಗೆ ಹೋಗಿ ಲಾಡ್ರ್ಸ್ ಸಭೆಯಲ್ಲಿ ಭಾಗವಹಿಸುವರು.

ಒಹನಾಲ್ಬರ್ಗ ಡಿ 1— ಲಾರ್ಡ್ ಮತ್ತು ಲೇಡಿ ವೇವಲ್ಲರು ಇಲ್ಲಿಗೆ ಭೇಟಿ ಕೊಟ್ಟು ಆಸ್ಪತ್ರೆ ಶಂಖುಸ್ಥಾಪನೆ ಮಾಡಿದರು.

ಕಲ್ಕತ್ತಾ ಡಿ 2— ಮೈಮನ್ಸಿಂಗಿನಲ್ಲಿ ಸರ್ ಫಜಲಾವಿ ಮತ್ತು ಇತ ಸ್ವತಂತ್ರ ಉಮೇದುವಾರರ ಮೇಲೆ ಮುಸ್ಲಿಂ ಲೀಗಿನವರ ಹಾವಳಿ ಮತ್ತು ಪಾಕಿಸ್ಥಾನದ ಗಲಾಟೆ ಜೋರಾಗಿದೆಯೆಂದು ಶ್ರೀ ನಿಯೋಗಿಯವರು ಶ್ರೀ ಶರತ್ ಚಂದ್ರ ಬೋಸರಿಗೆ ತಂತೀವಾರ್ತೆ ಕಳುಹಿಸಿದಾರೆ.

ನಾಗಪುರ ಡಿ 1— ನಾಗಪುರ ಟೈಮ್ಸ್ ಪತ್ರಿಕೆಯ ಮ್ಯಾನೇಜಿಂಗ್ ಡೈರೆಕ್ಟರು ಶುಕ್ಲರು ರೂ. 4500 ಹೊಸದಾಗಿ ಡಿಪಾಜಿಟ್ ಮಾಡಿ ಡಿಕ್ಲರೇಷನ್ ಕೊಟ್ಟಿರುವರು. ಈ ಪತ್ರಿಕೆ ಸಂಬಂಧದಲ್ಲಿ 4 ಸಾರಿ ಡಿವಾಜಿಟ್ಟುಗಳು ಒಟ್ಟು ರೂ. 12250 ಸರಕಾರದ ಬೊಕ್ಕಸಕ್ಕೆ ಸೇರಿದೆ.

ಬೆಂಗಳೂರು ನ 28— ಯುದ್ಧವು ನಿಂತಿದ್ದರಿಂದ ಬೆಂಗಳೂರು ಜನರಲ್ ವಾರ್ ಫಂಡು ಕಮಿಟಿಯನ್ನು ನವೆಂಬರ್ 1 ರಿಂದ ರದ್ದುಗೊಳಿಸಲಾಗಿದೆ.

ಝಾನ್ಸಿ ಡಿ 1— ಇಲ್ಲಿಯ ಮುನಿಸಿಪಾಲಿಟಿಯ ಗುಡಿಸುವವರಿಗೆ ಅಪರು ಕೇಳಿರುವ ತುಟ್ಟಿಭತ್ಯ. ಹೆರಿಗೆ ರಜಾ ಮುಂತಾದುವನ್ನು ಮುನಿಸಿಪಾಲಿಟಿಯವರು ಏರ್ಪಡಿಸಿಕೊಡದಿದ್ದಲ್ಲಿ ಡಿಸೆಂಬರ್ 20 ರಿಂದ ಮುಷ್ಕರ ಹಿಡಿಯುವರೆಂದು ಹೇಳಲಾಗಿದೆ.

ಬನ್‌ಬಜ್ಜಿನಲ್ಲಿ ಬಂದು ವನೆಯವರು ಬೆಂಕಿ ಕಾಯಿಸಿಕೊಳ್ಳುತ್ತಿದ್ದಾಗ ಅಗ್ನಿಯಲ್ಲಿ ಸ್ಫೋಟವಾಗಿ ಒಬ್ಬನು ಸತ್ತನು, ಕೆಲವರಿಗೆ ಗಾಯವಾಯಿತು.

ಈಜಿಪ್ಟಿನ ಸರಕಾರವು 1945—46 ನೇ ಸಾಲಿನ ಹತ್ತಿ ಬೆಳೆಗೆ ಹಣ ಒದಗಿಸಲು 30000000 ಪೌಂಡಿನ ಸಾಲ ಎತ್ತುವರಾಗಿರುವರು.

ಕೈರೋ ಡಿ 2— ಯುಹೂದಿಗಳ ಪದಾರ್ಥಗಳನ್ನು ಬಹಿಷ್ಕರಿಸಲು ಅರಬ್ ಕೌನ್ಸಿಲ್ ತೀರ್ಮಾನಮಾಡಿದೆ.

ಕನ್ನಾನೂರು ಡಿ 1— ಪಯನ್ನೂರು ಹೈಸ್ಕೂಲಿನ ಹೆಡ್ಮಾಸ್ಟರು ಅಲ್ಲಿಯ 23 ವಿದ್ಯಾರ್ಥಿಗಳು ಕಲ್ಕತ್ತಾ ಗುಂಡಿನೇಟಿನ ಪ್ರಕರಣದಲ್ಲಿ ಖಂಡನಾ ದಿನಾಚರಣೆಯನ್ನು ನಡೆಸಿದ್ದಕ್ಕಾಗಿ 5 ದಿನ ಸಸ್ಪೆಂಡ್ ಮಾಡಿದರು.

ಮಾಸ್ಕೋ ಡಿ 2— ತ್ರಿಮೂರ್ತಿಗಳ ಭೇಟಿಯು ಅಮೇರಿಕಾದಲ್ಲಿ ನಡೆಯಬಹುದೆಂದೂ, ಸ್ಟಾಲಿನ್ನರು ಅಲ್ಲಿಗೆ ಹೋಗಬಹುದೆಂದೂ ಹೇಳಲಾಗಿದೆ.

ಲಂಡನ್ ಡಿ 2— ಮರಣದಂಡನೆ ವಿಧಿಸಲಾಗಿರುವ ಜಾನ್ ಅವೇರಿಯು ಕ್ಷಯ ರೋಗ ಪೀಡಿತನಾಗಿದ್ದು ಫಾಸಿ ಶಿಕ್ಷೆಗೆ ಲಾಯಕ್ಕಾದಷ್ಟು ಆರೋಗ್ಯವೂ ಶಕ್ತಿಯೂ ಇಲ್ಲದಿರುವದರಿಂದ ಸೇಣಸಹಕಲ್ಪಡಲಾರನೆಂದು ಹೇಳಲಾಗಿದೆ.

ಬೆಂಗಳೂರು ಡಿ 3— ಶ್ರೀ ಕೆ. ಹನುಮಂತಯ್ಯನವರನ್ನು ಬೆಂಗಳೂರು ಸೆಂಟ್ರಲ್ ಜೈಲಿಗೆ ಕರೆತರಲಾಗಿದೆ.

ನ್ಯಾಯವಿಧಾಯಕ ಸಭೆ

(ವಿಶೇಷ ಪ್ರತಿನಿಧಿಯಿಂದ)

ಬೆಂಗಳೂರು, ತಾ 3 — ನೂತನವಾಗಿ ರಚಿಸಲ್ಪಟ್ಟಿರುವ ನ್ಯಾಯವಿಧಾಯಕ ಸಭೆಯ ದ್ವಿತೀಯ ಅಧಿವೇಶನದ ಕಾರ್ಯಕಲಾಪಗಳು ಈ ದಿವಸ ಮಧ್ಯಾಹ್ನ 12-30 ಕ್ಕೆ ಆಕಾರ ಕಛೇರಿ ಮುಹಡಿಯ ಮೇಲೆ ನ್ಯಾಯ ವಿಧಾಯಕ ಸಭಾ ಭವನದಲ್ಲಿ ಪ್ರಾರಂಭವಾಯಿತು.

ರಾಜಮಂತ್ರ ಪ್ರವೀಣ ಗುಂಡಪ್ಪ ಗೌಡರು ಸಭಾಧ್ಯಕ್ಷತೆ ವಹಿಸಿದ್ದರು. ಸಚಿವರೆಲ್ಲರೂ ಸಭಾರೂಢರಾಗಿದ್ದರು. ಪ್ರೇಕ್ಷಕರ ಸಂಖ್ಯೆ 20 ಮಾತ್ರವಿದ್ದಿತು.

ಶ್ರೀಗಳಾದ ರುದ್ರಪಟ್ಟಣ ವೆಂಕಟರಾಮಯ್ಯ (ನ್ಯಾಯ ಕಾರ್ಯದರ್ಶಿ) ಪಿ. ಕೃಷ್ಣಸ್ವಾಮಿ ರಾವ್ (ಅರಣ್ಯ ಖಾತೆ ಮೊಖ್ತೆಸರು) ಮತ್ತು ಕೆ. ಬಿ. ಜೋಷಿ (ಮರಾಮತ್ತು ಇಲಾಖೆ ಕಾರ್ಯದರ್ಶಿ) ಇವರುಗಳು ರಾಜಭಕ್ತಿ ಪ್ರಮಾಣವನ್ನು ಮಾಡಿದರು

ನ್ಯಾಯ ವಿಧಾಯಕ ಸಭೆಯ ಕಾರ್ಯದರ್ಶಿಗಳಾದ ಮಿ || ಪುನೆಘರ್ಕರವರು ಶ್ರೀ ವಿಶ್ವೇಶ್ವರಾರಾಜರವರಿಂದ ಅನುಮೋದನೆಯನ್ನು ಪಡೆದು ಆಕ್ಟುಗಳಾಗಿ ಪರಿವರ್ತಿಸಿದ ತರುವಾಯ, ವಾಹನ ಮುಂತಾದ ಆಕ್ಟುಗಳನ್ನು ಸೂಚಿಸಿ ಸಭೆಯ ಮುಂದೆ ಶೃತಿ ಪಡಿಸಿದರು.

ಅನಂತರ ಪ್ರಶ್ನೋತ್ತರಗಳು ಪ್ರಾರಂಭವಾಯಿತು. ಶ್ರೀ ಕೆ. ಎಂ. ಕೃಷ್ಣಪ್ಪಗೌಡ, ಎಂ. ಎಸ್. ಹುಚ್ಚೇಗೌಡ ಮುಂತಾದವರು ಮೈಸೂರು—ಮದರಾಸು ರೈಲ್ವೆ ನೌಕರ ಸಂಬಳದಲ್ಲಿ ಇರುವ ವ್ಯತ್ಯಾಸವನ್ನು ಕುರಿತು ಪ್ರಶ್ನಿಸಿದರು. ಶ್ರೀ ಟಿ. ಮರಿಯಪ್ಪನವರು ಮದ್ರಾಸು ರೈಲಿನಿಂದ ಮೈಸೂರು ರೈಲ್ವೆ ಸರ್ವಿಸಿಗೆ ಸೇರಿಕೊಂಡಿರುವ ನೌಕರರ ಸಂಬಳದ ವ್ಯತ್ಯಾಸವನ್ನು ಕುರಿತು ಪ್ರಶ್ನಿಸಿದರು. ಶ್ರೀ ಪುಲ್ಲರೆಡ್ಡಿಯವರು ಈ ಪ್ರಶ್ನೆಗಳಿಗೆಲ್ಲ 1 ಘಂಟೆ ಕಾಲ ನಿಂತು ಉತ್ತರಕೊಟ್ಟರು.

ಶ್ರೀ ಕೃಷ್ಣನಾಯರ್‌ರವರು ನಂದೀದುರ್ಗದ ಗಣಿಯಲ್ಲಿ ಆಸ್ಪತ್ರೆ ತೆಗೆಯುವ ವಿಚಾರದಲ್ಲಿ ಪ್ರಶ್ನಿಸಿದರು.

ಡಾ || ರಾಯರ್‌ರವರು ಆಗಲಿ ಎಂಬುದಾಗಿ ಉತ್ತರಕೊಟ್ಟರು.

ಶ್ರೀ ಟಿ. ಮರಿಯಪ್ಪನವರು ಹಿಂದೆ 12-30 ಕ್ಕೆ ಶಾಸನ ಸಭೆ ಸೇರುತ್ತಿತ್ತು. ಈಗ ಆ ಕಾಲ ಬದಲಾಯಿಸಿರುವುದರಿಂದ ಇನ್ನು ಮುಂದೆ ಮಧ್ಯಾಹ್ನ 12 ಘಂಟೆಗೆ ಸಡೆಯುಬೇಕೆಂದು ಸೂಚಿಸಿದರು.

ಅಧ್ಯಕ್ಷರು ಉತ್ತರವಾಗಿ ಸಭೆಯು ನಾಳೆಯ ದಿವಸದಿಂದ ಮಧ್ಯಾಹ್ನ 12 ಘಂಟೆಗೆ ಸೇರುವುದೆಂದರು

ನಿಲುವಳಿ ಸೂಚನೆಗಳನ್ನು ಮುಂಡಿಸುವ ನಿಯಮದಲ್ಲಿ ಆಗಿರುವ ಮಾರ್ಪಾಟನ್ನು ಅಧ್ಯಕ್ಷರು ಸಭೆಗೆ ವಿವರಿಸಿದರು.

ಶ್ರೀ ಗುರುವಾರೆಡ್ಡಿ ಮುಂತಾದವರು 4—5 ದಿನಗಳ ಕೆಳಗೆ ಸರ್ಕಾರದವರು ಪ್ರಕಟಿಸಿರುವ ಆಜ್ಞೆಯ ಮೇರೆ ಮೈಸೂರು ವಿಶ್ವವಿದ್ಯಾನಿಲಯದ ಸ್ಥಾನಪತಿಗಳು 150 ರೂತನಕ ಸಂಬಳದ ಮೇಲೆ ಕೆಲಸಗಾರರನ್ನು ಸೇರಿಸಿಕೊಳ್ಳುವುದಕ್ಕೂ ತೆಗಿಯುವುದಕ್ಕೂ ವರ್ಗ ಇತ್ಯಾದಿಗಳಲ್ಲಿ ಸ್ವತಂತ್ರವಾದ ಅಧಿಕಾರವನ್ನು ಹೊಂದಿರುವುದು ನ್ಯಾಯವಲ್ಲ ಎಂಬ ವಿಷಯ ಚರ್ಚೆಗಾಗಿ ಸೂಚಿಸಲ್ಪಟ್ಟಿತು.

ಡಾ || ರಾಯರ್‌ರು ಈ ಪ್ರಶ್ನೆ ಅಷ್ಟು ಅಗತ್ಯವಿಲ್ಲ; ಇದರಿಂದ ಯಾರಿಗೂ ತೊಂದರೆಯಿಲ್ಲವೆಂಬುದಾಗಿ ವಾದಿಸಿ ಚರ್ಚೆಗೆ ಅವಕಾಶವನ್ನು ಕೊಡಕೂಡದೆಂಬುದಾಗಿ ಒತ್ತಿ ಹೇಳಿದರು.

ಡಾ || ರಾಯರ್‌ರವರು ತಮ್ಮ ಅಭಿಪ್ರಾಯ ಪ್ರದರ್ಶನ ಮಾಡಿದನಂತರವೂ ಶ್ರೀ ಗುರುವಾರೆಡ್ಡಿಯವರು ಸ್ಥಾನಪತಿಗಳೊಬ್ಬರ ವಶದಲ್ಲಿ ಅಷ್ಟು ಸ್ವತಂತ್ರಾಧಿಕಾರವನ್ನು ವಹಿಸಿರುವುದನ್ನು ತೀವ್ರವಾಗಿ ಖಂಡಿಸಿ ಈ ಪ್ರಯತ್ನವು ಕಳೆದ ಕಾಲು ಶತಮಾನಗಳಿಂದಲೂ ನಡೆದು ಬಂದಿರುವ ವಿಲ್ಲಿಂಗ್ ಸಮಿತಿ ಇತ್ಯಾದಿಗಳ ದೃಷ್ಟಿಯಿಂದ ಸಾರ್ವಜನಿಕ ಹಿತಕ್ಕೆ ಕಂದುಕವಾಗಿರುವುದರಿಂದಲೂ, ಕಾರಣೇತ್ಯಾದಿಗಳಿಂದಲೂ ತಪ್ಪೆಂದೂ ಹೇಳಿದರು.

4—30 ಘಂಟೆಗೆ ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಬಹುದೆಂದು ಅಧ್ಯಕ್ಷಪೀಠ ತಿಳಿಸಿತು.

ರೈಲ್ವೆ ಸ್ಟೋರ್ಸಿನ ಬಿಲ್ ವಿರೋಧವಾಗಿ ಏಕ ಕಂಠ ಚರ್ಚೆ ನಡೆದು, ಶ್ರೀ ಪುಲ್ಲರೆಡ್ಡಿಯವರು ಮಸೂದೆಯ ಮೇಲೆ ಸರ್ಕಾರದ ಅಭಿಮತವನ್ನು ವಿವರಿಸಿ, ಮಸೂದೆಯನ್ನು ವಾಪಸು ಪಡೆದರು.

ಜ || ಷರೀಫರು ಹೊಗೆಸೊಪ್ಪಿನ ಬಿಲ್ಲನ್ನು ಸಭೆಯ ಮುಂದೆ ವಿವರಿಸಿದರು. ಕಾಂಗ್ರೆಸ್ ಪಕ್ಷದ ಸಂಪೂರ್ಣ ವಿರೋಧವು ಈ ಮಸೂದೆಗೆ ದೊರೆಯಿತು. ಈ ಬಿಲ್ಲು ಗೆಲುವನ್ನು ಪಡೆಯಿತು.

ಶ್ರೀ ಪುಲ್ಲರೆಡ್ಡಿಯವರು ಇಟ್ಟ ಸಾರೋಕ್ಯರಿಂದ ಬ್ರಿಟಿಷ್ ಪ್ರಜೆಗಳ ವಸತಿ